27

ತಖ್ವಾ

ಪ್ರಾಮುಖ್ಯತೆ ಮತ್ತು ಪ್ರತಿಫಲ

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575:014
PH: 0824-2271449 MOB: 8722695551

ಸೃಷ್ಟಿಕರ್ತನಾದ ಅಲ್ಲಾಹು ತನ್ನ ಭಯವಿರಿಸಿಕೊಳ್ಳಬೇಕೆಂದು ತನ್ನ ಸೃಷ್ಟಿಗಳಾದ ಮಾನವಕುಲಕ್ಕೆ ಆದೇಶಿಸುತ್ತಾನೆ.

﴿وَلَقَدْ وَصَّيْنَا ٱلَّذِينَ أُوتُوا۟ ٱلْكِتَـٰبَ مِن قَبْلِكُمْ وَإِيَّاكُمْ أَنِ ٱتَّقُوا۟ ٱللَّهَ ۚ﴾

“ನಾವು ನಿಮಗಿಂತ ಮುಂಚೆ ಗ್ರಂಥ ನೀಡಿದವರಿಗೆ ಕೊಟ್ಟ ಬೋಧನೆಯೂ, ಈಗ ನಿಮಗೆ ಕೊಡುತ್ತಿರುವ ಬೋಧನೆಯೂ ಅಲ್ಲಾಹನನ್ನು ಭಯಪಟ್ಟು ಜೀವಿಸಿರಿ ಎಂಬುದೇ ಆಗಿರುತ್ತದೆ.” (4:131)

ಅದೇ ರೀತಿ ಪ್ರವಾದಿ ಮುಹಮ್ಮದ್(ﷺ) ತಮ್ಮ ಸಹಾಬಿಗಳಿಗೆ ಎಲ್ಲಾ ಸಂದರ್ಭಗಳಲ್ಲೂ ದೇವಭಯವಿರಿಸಿ ಕೊಳ್ಳಬೇಕೆಂದು ಉಪದೇಶ ನೀಡುತ್ತಿದ್ದರು. ಈ ಕುರಿತು ಹರ್ಝುತ್ ಅಬೂ ಉಮಾಮ ಬಾಹಿಲಿ(رضي الله عنه) ಯವರಿಂದ ಈ ರೀತಿ ವರದಿಯಾಗಿದೆ. ಪ್ರವಾದಿ(ﷺ) ಯವರು ಹಜ್ಜ-

ತುಲ್ ವಿದಾಅ್ ಸಂದರ್ಭದಲ್ಲಿ ನೀಡಿದ ಉಪದೇಶದಲ್ಲಿ ಹೇಳಿದರು.

«اتَّقُوا رَبَّكُمْ وَصَلُّوا خَمْسَكُمْ، وَصُومُوا شَهْرَكُمْ، وَأَدُّوا زَكَاةَ أَمْوَالِكُمْ، وَأَطِيعُوا أُمَرَاءَكُمْ تَدْخُلُوا جَنَّةَ رَبِّكُمْ.»

"ಅಲ್ಲಾಹನನ್ನು ಭಯಪಡಿರಿ! ಐದು ಸಮಯದ ನಮಾಝ್ ನಿರ್ವಹಿಸಿರಿ. ನಿಮ್ಮ ಸೊತ್ತುಗಳ ಝಕಾತ್ ಪಾವತಿಸಿರಿ. ನಿಮ್ಮ ಧಾರ್ಮಿಕ ನಾಯಕರನ್ನು ಅನು-ಸರಿಸಿರಿ. ಆ ಮೂಲಕ ನಿಮ್ಮ ಸೃಷ್ಟಿಕರ್ತನ ಸ್ವರ್ಗದಲ್ಲಿ ದಾಖಲಾಗಿರಿ."

ಪ್ರವಾದಿ(ﷺ) ಯವರು ಧಾರ್ಮಿಕ ಕಾರ್ಯಗಳಿಗಾಗಿ ತನ್ನ ಅನುಯಾಯಿಗಳನ್ನು ದೂರ ಪ್ರದೇಶಗಳಿಗೆ ಕಳು-ಹಿಸುವಾಗ ಅಲ್ಲಾಹನ ಭಯವಿರಿಸಿಕೊಳ್ಳುವಂತೆ ಮತ್ತು ಜನರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವಂತೆ

ಉಪದೇಶ ನೀಡುತ್ತಿದ್ದರು. ಪ್ರವಾದಿ(ﷺ) ಯವರನ್ನು ಅನುಸರಿಸಿದ ಸಲಫ್ ಸ್ವಾಲಿಹ್‌ಗಳು ಕೂಡ ತಖ್ವಾದ ಕುರಿತು ಪರಸ್ಪರ ಉಪದೇಶ ನೀಡುತ್ತಿದ್ದರು ಎಂದು ಚರಿತ್ರೆಯ ಅವಲೋಕನದಿಂದ ಮನವರಿಕೆಯಾಗುತ್ತ-ದೆ. ಅವರ ತಮ್ಮ ಭಾಷಣಗಳಲ್ಲಿ, ಬರಹಗಳಲ್ಲಿ, ಮರ-ಣಾಸನ್ನ ಸ್ಥಿತಿಯಲ್ಲಿ ದೇವಭಯವಿರಿಸಬೇಕೆಂದು ಜನರಿಗೆ ವಸಿಯತ್ ಮಾಡುತ್ತಿದ್ದರು.

ಹಝ್ರತ್ ಉಮರ್(رضي الله عنه) ತನ್ನ ಪುತ್ರ ಹಝ್ರತ್ ಅಬ್ದುಲ್ಲಾ (رضي الله عنه) ರಿಗೆ ಈ ರೀತಿ ಪತ್ರ ಬರೆದದ್ದು ಚರಿತ್ರೆಯಲ್ಲಿ ದಾ-ಖಲಾಗಿದೆ. "ಅಲ್ಲಾಹನನ್ನು ಭಯಪಡು. ಏಕೆಂದರೆ ಯಾರು ಅಲ್ಲಾಹನನ್ನು ಭಯಪಟ್ಟು ಜೀವಿಸುತ್ತಾರೋ ಅವರನ್ನು ಅಲ್ಲಾಹು ಎಲ್ಲಾ ಅಪಾಯಗಳಿಂದ ಪಾರು ಮಾಡುತ್ತಾನೆ. ಯಾರು ಅಲ್ಲಾಹನ ದಾರಿಯಲ್ಲಿ ತಮ್ಮ ಸೊತ್ತು–ವಿತ್ತಗಳಿಂದ ಖರ್ಚು ಮಾಡುತ್ತಾರೋ ಅವರಿಗೆ ಅಲ್ಲಾಹನು ಅದಕ್ಕೆ ಬದಲಾಗಿ ಹಿರಿಯ ಪ್ರತಿಫಲವನ್ನು

ನೀಡುತ್ತಾನೆ. ಯಾರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸು-ತ್ತಾರೋ ಅವರಿಗೆ ಅಲ್ಲಾಹು ಅವರ ಸಂತಾನ, ಸೊತ್ತು, ಸಂಪತ್ತಿನಲ್ಲಿ ಸಮೃದ್ಧಿ ಉಂಟುಮಾಡುತ್ತಾನೆ."

ಹಝ್ರತ್ ಅಲಿ(رضي الله عنه) ಒಬ್ಬ ವ್ಯಕ್ತಿಯೊಂದಿಗೆ ಹೀಗೆ ಹೇ-ಳಿದ್ದಾರೆಂದು ಚರಿತ್ರೆಯಲ್ಲಿ ಕಾಣಬಹುದು. "ಯಾವ ಅಲ್ಲಾಹನೆದುರು ನಿಮಗೆ ಹಾಜರಾಗಲಿದೆಯೋ ಆ ಅಲ್ಲಾಹನ ಭಯವಿರಿಸಿಕೊಳ್ಳಬೇಕೆಂದು ನಾನು ನಿಮಗೆ ಉಪದೇಶಿಸುತ್ತೇನೆ. ಏಕೆಂದರೆ ಅವನೇ ಈ ಲೋಕದ ಮತ್ತು ಪರಲೋಕದ ನಿಜವಾದ ಮಾಲೀಕ."

ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್(رضي الله عنه) ಉಲ್ಲೇಖಿಸು-ತ್ತಾರೆ. "ಯಾರು ಅಲ್ಲಾಹು ಮತ್ತು ಅವನ ಶಿಕ್ಷೆಯನ್ನು ಭಯಪಟ್ಟು ಜೀವಿಸುತ್ತಾರೋ ಅವರೇ ಮುತ್ತಕೀ (ತಖ್ವಾ ಉಳ್ಳವರು) ಆಗಿದ್ದಾರೆ."

ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್(رضي الله عنه) ಕುರ್ಆನಿನ

ಈ ಕೆಳಗಿನ ವಚನವನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ.

اتَّقُوا اللَّهَ حَقَّ تُقَاتِهِ

“ಅಲ್ಲಾಹನನ್ನು ಅನುಸರಿಸಿರಿ. ಧಿಕ್ಕಾರ ತೋರಬೇಡಿ. ಸದಾ ಅಲ್ಲಾಹನನ್ನು ಸ್ಮರಿಸಿರಿ. ಎಂದೂ ಅವನನ್ನು ಮರೆಯಬೇಡಿ. ಸದಾ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ. ಕೃತಘ್ನತೆ ತೋರಬೇಡಿ.”

ಈ ಮೇಲಿನ ಉಲ್ಲೇಖಗಳನ್ನು ಅವಲೋಕನ ಮಾಡುತ್ತಾ ಹೋದರೆ ತಖ್ವಾ ಎನ್ನುವುದು ಎಷ್ಟೊಂದು ಪ್ರಾಮುಖ್ಯತೆ-ಯಿರುವ ವಿಷಯವಾಗಿದೆ ಎಂದು ಮನವರಿಕೆಯಾಗುತ್ತ-ದೆ. ತಖ್ವಾವನ್ನು ಅಳವಡಿಸಿಕೊಳ್ಳುವುದು ಎಂದರೆ ಒಂದು ಭಾಷಣ ಕೇಳಿ ಮುಗಿಸಿದಂತೆ ಅಥವಾ ಒಂದು ಪುಸ್ತಕ ಓದಿ ಮುಗಿಸಿದಂತೆ ಅಲ್ಲ. ವಿಧೇಯತೆ ಮತ್ತು ಅನುಸರ-ಣಾ ಶೀಲತೆಯನ್ನು ಮೈಗೂಡಿಸಿಕೊಂಡು ಸದಾ ದೇವ-ಸ್ಮರಣೆ ಮತ್ತು ಪ್ರಾರ್ಥನೆಯೊಂದಿಗೆ ಮೈಗೂಡಿಸಿಕೊಳ್ಳ

ಬಹುದಾದ ಒಂದು ತೇಜಸ್ಸಾಗಿದೆ ತಖ್ವಾ. ಜೀವನದಲ್ಲಿ ನಿರಂತರ ಶ್ರದ್ಧೆಯಿಂದ ಗಳಿಸಬಹುದಾದ ಈ ತಖ್ವಾ- ದಿಂದ ಸಿಗುವ ಪ್ರತಿಫಲವೇನೆಂದು ನೋಡೋಣ.

ತಖ್ವಾದಿಂದ ಸಿಗುವ ಐಹಿಕ ಲಾಭಗಳು

1. ದೇವಭಯ (ತಖ್ವಾ) ಇರುವವನಿಗೆ ಐಹಿಕವಾದ ಎಲ್ಲಾ ರೀತಿಯ ಸಮಸ್ಯೆಗಳು ಹಗುರವೆಂದು ತೋ- ರುತ್ತದೆ.

﴿ وَمَن يَتَّقِ ٱللَّهَ يَجْعَل لَّهُۥ مِنْ أَمْرِهِۦ يُسْرًا ٤ ﴾

"ಅಲ್ಲಾಹನನ್ನು ಭಯಪಡುವವನ ವ್ಯವಹಾರದ- ಲ್ಲಿ ಅಲ್ಲಾಹು ಅನುಕೂಲತೆಯನ್ನು ಒದಗಿಸುತ್ತಾನೆ." (ತಲಾಖ್ 4)

﴿ فَأَمَّا مَنْ أَعْطَىٰ وَٱتَّقَىٰ ٥ وَصَدَّقَ بِٱلْحُسْنَىٰ

﴿٦﴾ فَسَنُيَسِّرُهُۥ لِلْيُسْرَىٰ ﴿٧﴾

"ಯಾರು ದೇವ ಮಾರ್ಗದಲ್ಲಿ ಸಂಪತ್ತನ್ನು ವ್ಯಯಿಸುತ್ತಾನೋ, ದೇವಾಜ್ಞೆಯನ್ನು ಉಲ್ಲಂಘಿಸುವುದರಿಂದ ದೂರವಾಗುತ್ತಾನೋ ಮತ್ತು ಒಳಿತನ್ನು ಸತ್ಯವೆಂದು ಅಂಗೀಕರಿಸುತ್ತಾನೋ ಅವನಿಗೆ ನಾವು ಸರಳ ಪಥವನ್ನು ಸುಗಮಗೊಳಿಸಿಕೊಡುವೆವು." (ಲೈಲ್ 5-7)

2. ತಖ್ವಾ (ದೇವಭಯ) ಮನುಷ್ಯನನ್ನು ಶೈತಾನನ ದುರಾಕ್ರಮಣದಿಂದ ರಕ್ಷಿಸುತ್ತದೆ

﴿إِنَّ ٱلَّذِينَ ٱتَّقَوْاْ إِذَا مَسَّهُمْ طَٰٓئِفٌ مِّنَ ٱلشَّيْطَٰنِ تَذَكَّرُواْ فَإِذَا هُم مُّبْصِرُونَ ﴿٢٠١﴾﴾

"ವಾಸ್ತವದಲ್ಲಿ ಧರ್ಮ ನಿಷ್ಠರಿಗೆ ಸೈತಾನನ ಪ್ರಭಾವದಿಂದ ದೂರಾಲೋಚನೆಗಳು ಸೋಂಕಿದರೂ ಅವರು ತಕ್ಷಣ ಜಾಗೃತರಾಗುತ್ತಾರೆ ಮತ್ತು ಅವರಿಗೆ ಸರಿಯಾದ ಕರ್ಮ

ವಿಧಾನ ಯಾವುದೆಂದು ಸ್ಪಷ್ಟವಾಗುತ್ತದೆ." (ಅಲ್ ರಾಫ್ 201)

3. ತಖ್ವಾ (ದೇವಭಯ) ಭೂಮ್ಯಾಕಾಶಗಳಿಂದ ಅಲ್ಲಾಹನ ಅನುಗ್ರಹಗಳು ವರ್ಷಿಸಲು ಕಾರಣವಾಗುತ್ತದೆ

﴿ وَلَوْ أَنَّ أَهْلَ ٱلْقُرَىٰٓ ءَامَنُوا۟ وَٱتَّقَوْا۟ لَفَتَحْنَا عَلَيْهِم بَرَكَٰتٍ مِّنَ ٱلسَّمَآءِ وَٱلْأَرْضِ ﴾

"ಅವರು ವಿಶ್ವಾಸವಿರಿಸುತ್ತಿದ್ದರೆ ಮತ್ತು ದೇವಭಯವಿರಿಸುತ್ತಿದ್ದರೆ ನಾವು ಅವರಿಗೆ ಆಕಾಶ ಮತ್ತು ಭೂಮಿಯಿಂದ ಸಮೃದ್ಧಿಯ ದ್ವಾರಗಳನ್ನು ತೆರೆದು ಕೊಡುತ್ತಿದ್ದೆವು." (ಅಲ್‌ರಾಫ್ 96)

4. ತಖ್ವಾ (ದೇವಭಯ) ಸತ್ಯಾಸತ್ಯತೆಯ ಕುರಿತು ಅರಿವು ನೀಡುತ್ತದೆ

﴿ يَٰٓأَيُّهَا ٱلَّذِينَ ءَامَنُوٓا۟ إِن تَتَّقُوا۟

﴿ ٱللَّهَ يَجۡعَل لَّكُمۡ فُرۡقَانٗا ﴾

"ಓ ಸತ್ಯ ವಿಶ್ವಾಸಿಗಳೇ, ನೀವು ದೇವಭಯವನ್ನು ಇರಿಸಿ-ಕೊಂಡರೆ ಅಲ್ಲಾಹು ನಿಮಗೊಂದು ಒರೆಗಲ್ಲನ್ನು ಒದ-ಗಿಸುವನು." (ಅನ್‌ಫಾಲ್ 29)

﴿ يَٰٓأَيُّهَا ٱلَّذِينَ ءَامَنُواْ ٱتَّقُواْ ٱللَّهَ
وَءَامِنُواْ بِرَسُولِهِۦ يُؤۡتِكُمۡ كِفۡلَيۡنِ مِن رَّحۡمَتِهِۦ
وَيَجۡعَل لَّكُمۡ نُورٗا تَمۡشُونَ بِهِۦ ﴾

"ಓ ಸತ್ಯವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಿರಿ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿಡಿ. ಅಲ್ಲಾಹು ನಿಮಗೆ ಅವನ ಕೃಪೆಯ ಇಮ್ಮಡಿ ನೀಡುವನು ಮತ್ತು ನಿಮಗೆ ಪ್ರಕಾಶವನ್ನು ದಯಪಾಲಿಸುವನು. ನೀವು ಅದರ ಬೆಳಕಲ್ಲಿ ನಡೆಯುವಿರಿ." (ಹದೀದ್ 28)

5. ತಕ್ವಾ (ದೇವಭಯ)ವಿರುವ ಹೃದಯದಲ್ಲಿ ಇನ್ನಿತರ ।

ಭಯ ಉಂಟಾಗುವುದಿಲ್ಲ

﴿وَإِن تَصْبِرُواْ وَتَتَّقُواْ لَا يَضُرُّكُمْ كَيْدُهُمْ شَيْـًٔا ۗ﴾

"ನೀವು ಸಹನೆಯಿಂದ ವರ್ತಿಸಿದರೆ ಮತ್ತು ಅಲ್ಲಾಹನನ್ನು ಭಯಪಟ್ಟು ಕಾರ್ಯನಿರ್ವಹಿಸಿದರೆ ಅವರ ಯಾವ ತಂತ್ರವೂ ನಿಮ್ಮ ವಿರುದ್ಧ ಪರಿಣಾಮ ಬೀರುವುದಿಲ್ಲ." (ಆಲಿ ಇಮ್ರಾನ್ 120)

6. ತಕ್ವಾ (ದೇವಭಯ)ವಿರುವ ಹೃದಯದಲ್ಲಿ ಅಲ್ಲಾಹನ ಸಂಕೇತಗಳ ಕುರಿತು ಗೌರವವಿರುತ್ತದೆ

﴿ذَٰلِكَ وَمَن يُعَظِّمْ شَعَـٰٓئِرَ ٱللَّهِ فَإِنَّهَا مِن تَقْوَى ٱلْقُلُوبِ ۝٣٢﴾

"ಯಾರಾದರೂ ಅಲ್ಲಾಹು ನಿಶ್ಚಯಿಸಿದ ಲಾಂಛನಗಳನ್ನು

ಗೌರವಿಸುವುದಾದರೆ ಅದು ಹೃದಯಗಳ ತಖ್ವಾದಿಂದಾಗಿದೆ." (22:32)

7. ತಖ್ವಾ (ದೇವಭಯ)ವಿರುವ ಮನುಷ್ಯನ ಆರಾಧನೆಗಳನ್ನು ಅಲ್ಲಾಹು ಸ್ವೀಕರಿಸುತ್ತಾನೆ ಮತ್ತು ಅವನ ತಪ್ಪುಗಳನ್ನು ಕ್ಷಮಿಸುತ್ತಾನೆ

﴿يَـٰٓأَيُّهَا ٱلَّذِينَ ءَامَنُوا۟ ٱتَّقُوا۟ ٱللَّهَ وَقُولُوا۟
قَوْلًا سَدِيدًا ﴿٧٠﴾ يُصْلِحْ لَكُمْ أَعْمَـٰلَكُمْ
وَيَغْفِرْ لَكُمْ ذُنُوبَكُمْ ۗ وَمَن يُطِعِ ٱللَّهَ
وَرَسُولَهُۥ فَقَدْ فَازَ فَوْزًا عَظِيمًا ﴿٧١﴾﴾

"ಓ ಸತ್ಯ ವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಿರಿ ಮತ್ತು ಸರಿಯಾದ ಮಾತನ್ನೇ ಹೇಳಿರಿ. ಅಲ್ಲಾಹು ನಿಮ್ಮ ಕರ್ಮಗಳನ್ನು ಸರಿಪಡಿಸುವವನು ಮತ್ತು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಯಾರು ಅಲ್ಲಾಹು ಮತ್ತು

ಅವನ ಸಂದೇಶವಾಹಕರ ಅನುಸರಣೆ ಮಾಡುತ್ತಾನೋ ಅವನು ಮಹಾ ಯಶಸ್ಸನ್ನು ಪಡೆಯುತ್ತಾನೆ." (ಅಹ್‌ಝಾಬ್ 70-71)

8. ಯಾರ ಹೃದಯದಲ್ಲಿ ತಖ್ವಾ (ದೇವಭಯ)ದ ಚಿಂತೆ ಇರುವುದೋ ಆ ಹೃದಯದಲ್ಲಿ ದುಷ್ಚಿಂತನೆಗಳು, ದುರಭ್ಯಾಸಗಳು ಮತ್ತು ದುರ್ವಿಚಾರಗಳು ಮನೆ ಮಾಡುವುದಿಲ್ಲ. ಅವನು ದುರ್ಮಾರ್ಗದಲ್ಲಿ ನಡೆಯುವುದಿಲ್ಲ.

﴿وَأَنَّ هَٰذَا صِرَٰطِي مُسۡتَقِيمٗا فَٱتَّبِعُوهُۖ وَلَا تَتَّبِعُواْ ٱلسُّبُلَ فَتَفَرَّقَ بِكُمۡ عَن سَبِيلِهِۦۚ﴾

"ನನ್ನ ನೇರ ಮಾರ್ಗ ಇದೇ ಆಗಿದೆ. ಆದ್ದರಿಂದ ಇದರಲ್ಲಿ ನಡೆಯಿರಿ. ಅನ್ಯ ಮಾರ್ಗಗಳಲ್ಲಿ ನಡೆಯಬೇಡಿ. ಅವು ಅವನ ಮಾರ್ಗದಿಂದ ತಪ್ಪಿಸಿ ನಿಮ್ಮನ್ನು ಚದುರಿಸಿ ಬಿಡುತ್ತದೆ." (ಅನ್‌ಆಮ್ 153)

ದೇವಭಯವಿರಿಸಿಕೊಳ್ಳುವುದರಿಂದ ಸಿಗುವ ಇನ್ನೂ ಅನೇಕ ಪ್ರಯೋಜನಗಳ ಕುರಿತು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ವರದಿಗಳಿವೆ. ಎಲ್ಲವನ್ನೂ ಈ ಲೇಖನ-ದಲ್ಲಿ ವಿವರಿಸುವುದು ಸಾಧ್ಯವಿಲ್ಲ. ಮುಂದೆ ಈ ಕುರಿತು ಪರಲೋಕದಲ್ಲಿ ಸಿಗುವ ಹಲವಾರು ಪ್ರತಿಫಲಗಳ ಪೈಕಿ ಕೆಲವನ್ನು ಅವಲೋಕನ ಮಾಡೋಣ.

ತಖ್ವಾದಿಂದ ಪಾರತ್ರಿಕವಾಗಿ ಸಿಗುವ ಪ್ರತಿಫ-ಲಗಳು

1. ತಖ್ವಾ (ದೇವಭಯ) ಉಳ್ಳವರಿಗೆ ದೇವನ ಸಾಮಿಪ್ಯ-ದಲ್ಲಿ ಮಾನ್ಯತೆ ಮತ್ತು ಗೌರವವಿರುತ್ತದೆ

﴿إِنَّ أَكْرَمَكُمْ عِندَ ٱللَّهِ أَتْقَىٰكُمْ﴾

“ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತ್ಯಧಿಕ ಗೌರವಕ್ಕೆ ಪಾತ್ರನಾಗುತ್ತಾನೆ.”

(ಹುಜುರಾತ್ 13)

2. ತಖ್ವಾ (ದೇವಭಯ) ಉಳ್ಳವರು ಅಂತಿಮ ದಿನದ ಯಾತನೆಯಿಂದ ರಕ್ಷೆ ಪಡೆಯುವರು

﴿ وَإِن مِّنكُمْ إِلَّا وَارِدُهَا ۚ كَانَ عَلَىٰ رَبِّكَ حَتْمًا مَّقْضِيًّا ﴿٧١﴾ ثُمَّ نُنَجِّي الَّذِينَ اتَّقَوا وَّنَذَرُ الظَّالِمِينَ فِيهَا جِثِيًّا ﴿٧٢﴾ ﴾

“ನಿಮ್ಮ ಪೈಕಿ ನರಕವನ್ನು ಹಾದು ಹೋಗದವರು ಯಾರೂ ಇಲ್ಲ. ಇದೊಂದು ನಿರ್ಧರಿತ ವಿಷಯವಾಗಿದ್ದು ಇದನ್ನು ಪೂರ್ಣಗೊಳಿಸುವುದು ನಿಮ್ಮ ರಬ್ಬಿನ ಬಾಧ್ಯತೆಯಾಗಿದೆ. ಆ ಬಳಿಕ ನಾವು ಭೂಲೋಕದಲ್ಲಿ ಧರ್ಮನಿಷ್ಠರಾಗಿದ್ದವರನ್ನು ರಕ್ಷಿಸುವೆವು ಮತ್ತು ಅಕ್ರಮಿಗಳನ್ನು ಅಲ್ಲೇ ಬಿದ್ದಿರಲು ಬಿಟ್ಟುಬಿಡುವೆವು.” (ಮರ್ಯಮ್ 71-72)

3. ತಖ್ವಾ (ದೇವಭಯ) ಸ್ವರ್ಗದ ಅವಕಾಶ ಗಿಟ್ಟಿಸಲು ಲಭ್ಯವಿರುವ ಒಂದು ಉತ್ಕೃಷ್ಟ ಸಾಧನವಾಗಿದೆ

﴿ تِلْكَ ٱلْجَنَّةُ ٱلَّتِى نُورِثُ مِنْ عِبَادِنَا مَن كَانَ تَقِيًّا ﴿٦٣﴾ ﴾

“ಇದೇ ಆ ಸ್ವರ್ಗ. ನಾವು ನಮ್ಮ ದಾಸರಲ್ಲಿ ಧರ್ಮ-ನಿಷ್ಠರಾಗಿದ್ದವರನ್ನು ಅದರ ವಾರಸುದಾರರನ್ನಾಗಿ ಮಾಡುವೆವು.” (ಮರ್ಯಮ್ 63)

4. ತಖ್ವಾ (ದೇವಭಯ) ಉಳ್ಳವರಿಗಾಗಿ ಅಲ್ಲಾಹು ಸ್ವ-ರ್ಗವನ್ನು ಕಾಯ್ದಿರಿಸಿದ್ದಾನೆ.

﴿ ۞ وَسَارِعُوٓا۟ إِلَىٰ مَغْفِرَةٍ مِّن رَّبِّكُمْ وَجَنَّةٍ عَرْضُهَا ٱلسَّمَٰوَٰتُ وَٱلْأَرْضُ أُعِدَّتْ لِلْمُتَّقِينَ ﴿١٣٣﴾ ﴾

“ನಿಮ್ಮ ರಬ್ಬಿನ ಕ್ಷಮೆಯ ಕಡೆಗೆ ಮತ್ತು ಭೂಮ್ಯಾಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸಿರಿ. ಅದು ದೇವಭಯ ಉಳ್ಳವರಿಗಾಗಿ ಸಿದ್ಧಗೊಳಿಸಲ್ಪಟ್ಟಿದೆ.” (ಆಲಿ ಇಮ್ರಾನ್ 133)

5. ತಖ್ವಾ (ದೇವಭಯ) ಇರುವವರು ವಿಧಿ ನಿರ್ಣಾಯಕ ದಿನದಲ್ಲಿ ಭಯ ಮತ್ತು ಹತಾಶೆಯಿಂದ ಮುಕ್ತರಾಗುವರು

﴿ وَيُنَجِّي ٱللَّهُ ٱلَّذِينَ ٱتَّقَوۡاْ بِمَفَازَتِهِمۡ لَا يَمَسُّهُمُ ٱلسُّوٓءُ وَلَا هُمۡ يَحۡزَنُونَ ٦١ ﴾

“ಇಲ್ಲಿ ದೇವಭಯವುಳ್ಳ ಜನರ ವಿಜಯದ ಕಾರಣ ಅಲ್ಲಾಹು ಅವರಿಗೆ ಮೋಕ್ಷ ನೀಡುವನು. ಅಲ್ಲಿ ಅವರಿಗೆ ಯಾವುದೇ ಹಾನಿಯು ತಟ್ಟದು ಮತ್ತು ಅವರು ದುಃಖಿತರಾಗಲಾರರು.” (ಝುಮರ್ 61)

6. ತಖ್ವಾ (ದೇವಭಯ) ಇರುವವರ ಬಳಿಗೆ ವಿಧಿ ನಿ-ರ್ಣಾಯಕ ದಿನದಂದು ಸ್ವರ್ಗವನ್ನು ತರಲಾಗುವುದು

﴿ وَأُزْلِفَتِ ٱلْجَنَّةُ لِلْمُتَّقِينَ غَيْرَ بَعِيدٍ ﴿٣١﴾ ﴾

"ಸ್ವರ್ಗವನ್ನು ಮುತ್ತಕೀಗಳ (ಧರ್ಮನಿಷ್ಠರು) ಸಮೀಪ-ಕ್ಕೆ ತರಲಾಗುವುದು, ಸ್ವಲ್ಪವೂ ದೂರವಿರಲಾರದು." (ಕಾಫ್ 31)

7. ತಖ್ವಾ (ದೇವಭಯ) ಉಳ್ಳವರಿಗೆ ಪರಲೋಕದಲ್ಲಿ ಅಲ್ಲಾಹನ ಕಡೆಯಿಂದ ಸುವಾರ್ತೆ ಇದೆ. ದೇವಚ-ರರು ಅವರ ನಿಕಟವರ್ತಿಗಳಾಗಿರುವರು.

﴿ لَهُمُ ٱلْبُشْرَىٰ فِى ٱلْحَيَوٰةِ ٱلدُّنْيَا
وَفِى ٱلْءَاخِرَةِ ﴾

"ಇಹ-ಪರಗಳಲ್ಲಿ ಅವರಿಗೆ ಶುಭವಾರ್ತೆ ಇದೆ." (ಯೂನುಸ್ 64)

﴿ لَا يَحْزُنُهُمُ الْفَزَعُ الْأَكْبَرُ
وَتَتَلَقَّاهُمُ الْمَلَائِكَةُ هَٰذَا يَوْمُكُمُ
الَّذِي كُنتُمْ تُوعَدُونَ ﴿١٠٣﴾ ﴾

"ಅತ್ಯಂತ ಭಯ ಭೀತಿಯ ಆ ಕಾಲವು ಅವರಿಗೆ ಕೊಂಚವೂ ವ್ಯಾಕುಲತೆಯನ್ನು ಉಂಟು ಮಾಡದು ಮತ್ತು ದೇವಚರರು ಎದುರುಗೊಂಡು, ಇದು ನಿಮಗೆ ವಾಗ್ದಾನ ಮಾಡಲಾದ ಅದೇ ದಿನವಾಗಿದೆ ಎನ್ನುತ್ತಾ ಅವರನ್ನು ಬರಮಾಡಿಕೊಳ್ಳುವರು." (ಅಂಬಿಯಾ 103)

ಮನುಷ್ಯನ ದೈಹಿಕ ಮತ್ತು ಪಾರತ್ರಿಕ ವಿಜಯಕ್ಕೆ ತಖ್ವಾ (ದೇವಭಯ) ಅತ್ಯಂತ ಅಗತ್ಯ ಮತ್ತು ಅನಿವಾರ್ಯ ಸಾ-ಧನವಾಗಿದೆ. ದೇವ ಭಯವಿಲ್ಲದೆ ಮನುಷ್ಯನು ಕೆಲವೊ-ಮ್ಮೆ ಕರ್ಮಗಳನ್ನು ಪ್ರವರ್ತಿಸಿದರೂ (ಉದಾ, ನಮಾಝ್, ಝಿಕ್ರ್,ಸ್ವಲಾತ್, ಝಕಾತ್, ಉಪವಾಸ, ಹಜ್ಜ್ ಮುಂ-ತಾದವುಗಳು ತಿರಸ್ಕಾರಯೋಗ್ಯವಾಗಿರುವುದು ಎನ್ನು-

ವುದು ಮನುಷ್ಯರಾದ ನಮ್ಮನ್ನು ವಿವೇಚನೆಗೆ, ಚಿಂತನೆಗೆ ಈಡುಮಾಡಬೇಕಿದೆ. ನಮ್ಮನ್ನು ನಾವು ಆತ್ಮಸಂಸ್ಕರಣೆ ಮಾಡಿಕೊಂಡು ಜೀವನದಲ್ಲಿ ತಖ್ವಾ ಅಳವಡಿಸಿಕೊಳ್ಳ-ಲು ಪ್ರಯತ್ನಿಸಬೇಕು. ಅಲ್ಲಾಹು ನಮ್ಮ ಮೇಲೆ ಕರುಣೆ ತೋರಿ ತಖ್ವಾವುಳ್ಳ ಅವನ ದಾಸರಲ್ಲಿ ಸೇರಿಸಿ ಅನುಗ್ರ-ಹಿಸಲಿ ಎಂದು ಪ್ರಾರ್ಥಿಸೋಣ.

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575:014
MOB: 9731593091 / 9945171612

Jamiyathe Ahle Hadees
Mangalore